**2** ನನ್ನ ಕೃತಿಗಳು ಬಂದ ತಕ್ಷಣವೇ ವಿಮರ್ಶೆ ಸಿಗಬೇಕು ಎನ್ನುವ ಕೃತಿಕಾರ ನಿಜದ ಅರ್ಥದಲ್ಲಿ 'ಭ್ರಮಾಲೋಕ'ದಲ್ಲಿ ತೇಲಾಡುತ್ತಿರುತ್ತಾನೆ. ಇನ್ನೊಂದು ಕೋನದಲ್ಲಿ ಈ ಪ್ರಶ್ನೆಯನ್ನು ನೋಡಿದರೆ, ಒಂದು ಉತ್ತಮ ಕೃತಿಗೆ 'ವಿಮರ್ಶೆ'ಯ ಹೆಸರಿನಲ್ಲೇ ನ್ಯಾಯ ಸಿಗಬೇಕೆಂಬ, ಇಂಥ ಪತ್ರಿಕೆಗಳ ಮೂಲಕವೇ ವಿಮರ್ಶೆ ದಕ್ಕಬೇಕೆಂಬ ಬಯಕೆಯ ಲೇಖಕರು ಆತ್ಮರತಿಯಿಂದ ನರಳುತ್ತಿರಬಹುದೇ? ಎಂಬ ಗುಮಾನಿಯೂ ಉಂಟಾಗುತ್ತದೆ. ವಿಮರ್ಶೆ ಎನ್ನುವುದು ಅಭಿಪ್ರಾಯದ, ಸ್ಪಂದನೆಯ, ಭಿನ್ನಾಭಿಪ್ರಾಯಗಳ, ಅಂಕಣಗಳ, ಮಾತುಕತೆಗಳ ಸ್ವರೂಪದಲ್ಲೂ ವ್ಯಕ್ತವಾಗಬಹುದು. ಕನ್ನಡದ ಗಟ್ಟಿ ಕವಿಗಳಾದ ಸು.ರಂ. ಎಕ್ಕುಂಡಿ. ಗಂಗಾಧರ ಚಿತ್ತಾಲರಗಿಂತ ಈಗಿನ ಕೆಲವು ಲೇಖಕರಿಗೆ ಬೇಗ ಜನಪ್ರಿಯತೆ ಸಿಕ್ಕಿದೆ ಎಂದು ನನಗಂತೂ ಅನಿಸಿದೆ. ಆ ಕವಿಗಳ ಕಾಲದಲ್ಲಿ ಸಾಮಾಜಿಕ ಜಾಲತಾಣಗಳು ಇರಲಿಲ್ಲ. ಅವರ ಪುಸ್ತಕಗಳಿಗೆ ಬರೆದಿರುವ ಮುನ್ನುಡಿಗಳೇ ಸಮರ್ಥ ವಿಮರ್ಶೆಯೂ ಆಗಿದ್ದವು.

**3** ನಮ್ಮ ಕಾಲ ಆರೋಗ್ಯಕರ ಸಂವಾದದ ಕಾಲವಲ್ಲ ಎಂದೆನಿಸುವುದು ಸಹಜ. ಹೊಸತಲೆಮಾರು ಹಲವು ಗುಂಪುಗಾರಿಕೆಗಳ ನಡುವೆ ಉಸಿರಾಡುತ್ತಿದೆ. ನಮ್ಮ ಹೊಸತಲೆಮಾರಿನ ಓದಿನ ಕ್ರಮ ಹೇಗಿದೆ ಎಂದರೆ ನಾವೇ ನಮ್ಮ ಸರೀಕರ ಕೃತಿಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಳ್ಳುತ್ತಿಲ್ಲ. ಒಬ್ಬ ನಿಜವಾದ ಓದುಗ ಗಟ್ಟಿಯಾದ ಕೃತಿ ಯಾವ ಮೂಲದ್ದೇ ಆಗಲಿ, ಯಾರೇ ಬರೆದಿದ್ದರೂ ಅದನ್ನು ಸ್ವೀಕರಿಸಬೇಕಾಗುತ್ತದೆ. ಆ ಕೆಲಸ ನಿಜವಾಗಲೂ ನಡೆಯುತ್ತಿದೆಯೇ? ಹೀಗಾಗಿಯೇ ಇಂದು ಅನೇಕ ಒಳ್ಳೆಯ ಕೃತಿಗಳು ಸರಿಯಾದ ಸಮಯಕ್ಕೆ ಗಮನಕ್ಕೆ ಬಾರದೇ ಹೋಗುತ್ತಿವೆ. ಆದರೆ ನಮ್ಮ ನಂತರದ ತಲೆಮಾರುಗಳು ಆ ಬಗೆಯ ಕೃತಿಗಳನ್ನು ಮೇಲೆತ್ತಬಲ್ಲವು. ಕವಿಗಳಾದ ಸು.ರಂ. ಎಕ್ಕುಂಡಿ, ಗಂಗಾಧರ ಚಿತ್ತಾಲ, ಕೆ.ಎಸ್. ನರಸಿಂಹಸ್ವಾಮಿ ನಮ್ಮ ಮನದಲ್ಲಿ ಈಗ ಮತ್ತೆ ಮತ್ತೆ ನೆನಪಾಗುತ್ತಾರಲ್ಲ, ಹಾಗೆ. ಈ ಸಂದರ್ಭದಲ್ಲಿ 'ವೃತ್ತಿಪರ ವಿಮರ್ಶಕ' ಎಂಬ ಪ್ರಾಣಿ ಇದ್ದಾನೆಯೇ? ಎಂಬುದೇ ದೊಡ್ಡ ಪ್ರಶ್ನೆ. ಏಕೆಂದರೆ ವಿಮರ್ಶೆಯೂ ಒಂದು ಸೃಜನಶೀಲ ಬರವಣಿಗೆ ಎಂಬುದನ್ನು ಒಪ್ಪಲು ಕೆಲವರು ಈಗಲೂ ತಯಾರಿಲ್ಲ. ಒಂದು ಗಟ್ಟಿಯಾದ ಕೃತಿಗೆ ಅಕಡೆಮಿಕ್ ಆದ ವಿಮರ್ಶೆಯ ಅಗತ್ಯವಿಲ್ಲ. ಒಂದು ಪ್ರಾಮಾಣಿಕ ಸ್ಪಂದನ, ಅಭಿಪ್ರಾಯಗಳಿದ್ದರೂ ಸಾಕು. ಪ್ರಶಸ್ತಿಯ ತುರಾಯಿ ಸಿಕ್ಕಿಸಿಕೊಂಡರೂ ಓದುಗರ ಗಮನಕ್ಕೆ ಬರದ ಹಲವು ಕೃತಿಗಳಿವೆ. ಹೊಸಬರು ತಮ್ಮ ಕೃತಿಗಳಿಗೆ ಬರೆದಿರುವ ಮುನ್ನುಡಿಗಳನ್ನೇ ವಿಮರ್ಶೆಗಳೆಂದು ಯಾಕೆ ಭಾವಿಸುತ್ತಿಲ್ಲ? ಹೊಗಳಿಕೆಯನ್ನೇ ವಿಮರ್ಶೆ ಎಂದು ಭಾವಿಸುವುದು ಎಷ್ಟರಮಟ್ಟಿಗೆ ಸರಿ? ದೊಡ್ಡ ಪ್ರಶಸ್ತಿಗಳು ಬಂದಿರುವ ಕೃತಿಗಳು ಮಾತ್ರ ಮುಖ್ಯವೇ? ಅಥವಾ ಇಂತವರು ಮಾತ್ರವೇ ಮುನ್ನುಡಿ ಬರೆದರೆ ನಿಜವಾದ ವಿಮರ್ಶೆಯೇ? ಮುಂತಾದ ಪ್ರಶ್ನೆಗಳನ್ನು ಈ ಹಿನ್ನೆಲೆಯಲ್ಲಿ ಕೇಳಿಕೊಳ್ಳಬೇಕಾಗುತ್ತದೆ.

**4** ಹೀಗೆ ಕೇಳುವವರು ಸಮಕಾಲೀನ ವಿಮರ್ಶೆಯನ್ನಾಗಲಿ, ಅಥವಾ ಹೊಸತಲೆಮಾರಿನ ಕೃತಿಗಳ ಕುರಿತು ಬಂದಿರುವ ಬರಹಗಳನ್ನು ಸಮಗ್ರವಾಗಿ ಗ್ರಹಿಸಿಲ್ಲವೆಂದೇ ಅರ್ಥ. ಇಷ್ಟಕ್ಕೂ ಯಾವುದೇ ವಿಮರ್ಶಕ ಪ್ರತಿಯೊಬ್ಬ ಹೊಸಬರಹಗಾರನ ಕೃತಿಯ ಬಗ್ಗೆ ವಿಮರ್ಶೆ ಬರೆಯಲು ಸಾಧ್ಯವಿಲ್ಲವೇನೋ? ಒಬ್ಬ ವಿಮರ್ಶಕನ ಕೆಲಸ ಅಥವಾ ಆಸಕ್ತಿ ಕೇವಲ ಹೊಸ ಬರಹಗಾರರ ಕುರಿತಾಗಿ ಮಾತ್ರ ಇರುವುದಿಲ್ಲ. ಆದರೆ ಸ್ಪಂದಿಸುವ ಜವಾಬ್ದಾರಿಯಂತೂ ಇರುತ್ತದೆ. ಇದನ್ನು ತಕ್ಕಮಟ್ಟಿಗಾದರೂ ನಮ್ಮ ಹಿರಿಯರು ನಿಭಾಯಿಸಿದ್ದಾರೆ. ಎಚ್.